**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 21/2021**

| | | |
|---|---|---|
| **ಸಾಕ್ಷಿದಾರರ ಹೆಸರು** | **ಃ ಆರ್ ತಿಪ್ಪೇಸ್ವಾಮಿ** | **ಸಿ.ಡಬ್ಲ್ಯೂಃ 1** |
| **ತಂದೆಯ ಹೆಸರು** | **ಃ ದೊಡ್ಡಬಸಪ್ಪ ಆರ್** | **ಪಿ.ಡಬ್ಲೂಃ 4** |
| **ವಯಸ್ಸು** | **ಃ 69** | |
| **ಉದ್ಯೋಗ** | **ಃ ನಿವೃತ್ತ ಎ ಸಿ ಎಫ್** | |
| **ವಾಸಸ್ಥಳ** | **ಃ ಬೆಂಗಳೂರು.** | |

**ದಿನಾಂಕಃ 15.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು 2014 ನೇ ಇಸವಿಯಿಂದ 2016 ಜೂನ್ ವರೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 10.02.2015 ರಂದು ಚಾಸಾ-3 ರವರು ನನಗೆ ತಮ್ಮ ಅರಣ್ಯ ವ್ಯಾಪ್ತಿಯಲ್ಲಿ ಜಿಂಕೆಯ ಮಾಂಸ ದೊರೆತಿದ್ದು, ಅದನ್ನು ಕಾನೂನು ರೀತಿಯಾಗಿ ವಿಲೇವಾರಿ ಮಾಡಬೇಕಾಗಿರುವುದರಿಂದ ನನಗೆ ಬರಲು ತಿಳಿಸಿದರು. ಸದರಿ ದಿನದಂದು ನಾನು ಬೆಳಗ್ಗೆ 8.30 ಕ್ಕೆ ನಾನು ನ ರಾ ಪುರ ಅರಣ್ಯ ವಲಯ ಕಚೇರಿಗೆ ಬಂದಿರುತ್ತೇನೆ. ಸದರಿ ಜಿಂಕೆಯ ಮಾಂಸ ಚಾಸಾ-3 ರವರ ಕಚೇರಿಯ ಒಳಗಡೆ ಇತ್ತು, ತದನಂತರ ಸದರಿ ಮಾಂಸವನ್ನು ಕಚೇರಿಯ ಹಿಂಭಾಗದಲ್ಲಿ ನನ್ನ ಸಮಕ್ಷಮ ಸುಡಲಾಯಿತು. ಸದರಿ ಜಿಂಕೆಯ ಮಾಂಸವನ್ನು ವಿಲೇವಾರಿ ಮಾಡಿದ ಬಗ್ಗೆ ಆ ಸಂದರ್ಭದಲ್ಲಿ ಮಹಜರ್ ಜರುಗಿಸಲಾಯಿತು. (ಕಡತದಲ್ಲಿ ಸದರಿ ಮಹಜರ್ ನ ದಾಖಲೆ ಲಭ್ಯವಿರದ ಕಾರಣ ಮತ್ತು ಆರೋಪಿ ಪರ ವಕೀಲರು ಸದರಿ ಮಹಜರ್ ನ ಸತ್ಯ ಪ್ರತಿ ದಾಖಲೆಗೆ ತಕರಾರು ವ್ಯಕ್ತಪಡಿಸಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿರುತ್ತಾರೆ. ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**